ಅವನ ಮಣಮಣ ಕೇಳಿಸಿಕೊಂಡ ಪಕ್ಕದ ಸೀಟಿನವ ಪಕ್ಕಾ ಆಡುಮಾತಿನ ಶೈಲಿಯಲ್ಲಿ 'ಇಷ್ಟು ಹೊತ್ತಿಗೆ ಅಲ್ಲಿ ಎಂಥದೂ ಸಿಗೂದಿಲ್ರೀ, ಮಾರಾಯ್ರೆ ಹಾಂ' ಎಂದು ಕೊನರುತ್ತಿದ್ದ ಸಣ್ಣ ಆಸೆಗೂ ಕಡ್ಡಿ ಗೀರಿದ. 'ಚೀಲದಲ್ಲಿ ಯಾವಾಗಲೂ ಒಂದು ಪ್ಯಾಕೆಟ್ ಬಿಸ್ಕಿಟ್ ಇಟ್ಟುಕೊಳ್ಳಿ' ಎಂದು ರೀಮಾ ಪದೇ ಪದೇ ಹೇಳುವ ಮಾತು ಮತ್ತೆ ಮತ್ತೆ ನೆನಪಾಗಿ, ಹೆಂಡತಿ ಮಾತು ಕೇಳದವನು ಗಂಡನೂ ಅಲ್ಲ, ಗಂಡಸೂ ಅಲ್ಲ ಎಂಬ ವೇದಾಂತಕ್ಕೆ ಬಂದ. ಬೆಂಗಳೂರಿನಿಂದ ಹೊರಡುವಾಗ ಬಿಸ್ಕಿಟ್ ಪ್ಯಾಕೆಟನ್ನು ಮರೆಯದೆ ಇಡುತ್ತಿದ್ದ ಅವಳ ದೂರ ದೃಷ್ಟಿಯನ್ನು ನೆನಸಿಕೊಂಡ. ಆಕೆಯ ಮಾತನ್ನು ತಪ್ಪದೇ ಮರೆಯುತ್ತಿದ್ದ ತನ್ನ ಎಡವಟ್ಟುತನಕ್ಕೆ ಒಣಗಿದ ತರಕಾರಿಯಂತೆ ಸಪ್ಪೆ ಮುಖ ಮಾಡಿಕೊಂಡ.

ಅರ್ಧ ಘಂಟೆಯಲ್ಲಿ ಡ್ರೈವರ್, ಟಯರನ್ನು ಬದಲಿಸಿ ಷಟರ್ ಏರಿಸಿ ಬಸ್ ಸ್ಟಾರ್ಟ್ ಮಾಡಿದ. ಪುರುಷ ಪ್ರಯಾಣಿಕರ ರಸ್ತೆಯಂಚಿನ ಕೆಲಸ ಮುಗಿಯುತ್ತಿದ್ದಂತೆ ಮಹಿಳಾ ಪ್ರಯಾಣಿಕ ಕೆಲವರು ಬಸ್ ಇಳಿದು ಕತ್ತಲ ಸುಖ ಆನಂದಿಸ ಹೋದವರು ದಡಬಡ ಬಸ್ಸೇರಿದರು. 'ಕುಂಯ್ಯೋ ಮರ್ರೋ' ಎನ್ನುತ್ತ ಬಸ್ಸು ಆ ಸಣ್ಣ ಏರಿನಲ್ಲಿ ಪ್ರಯಾಣ ಮುಂದುವರಿಸಿತು. ಏರು ದಾರಿ ನಂತರದ ಸಪಾಟು ರಸ್ತೆಯಲ್ಲಿ ಎಷ್ಟೇ ವೇಗವಾಗಿ ಚಲಿಸಿದರೂ ಶಿರಸಿ ಮುಟ್ಟುವಷ್ಟರಲ್ಲಿ ಹತ್ತು ಗಂಟೆ ಆಗಿ ಹೋಗಿತ್ತು. ಪ್ರಯಾಣಿಕರ ಪುಣ್ಯಕ್ಕೆ ಬಸ್‌ಸ್ಟ್ಯಾಂಡ್ ಹೋಟೆಲಿನಲ್ಲಿ ಊಟವಿತ್ತು. ನಿಜ ಹೇಳಬೇಕೆಂದರೆ ಪುಣ್ಯ ಮಾಡಿದ್ದು ಹೋಟೆಲಿನವನು. ಎಂಟಕ್ಕೆ ಬಸ್ಸು ಶಿರಸಿಗೆ ಬಂದಾಗ ಅದರಲ್ಲಿದ್ದವರಲ್ಲಿ ಬಹುತೇಕರು ಊಟ ಮಾಡುವುದು ಇದೇ ಹೋಟೆಲಿನಲ್ಲಿ. ಮಾಡಿದ ಅಡುಗೆ ಹಾಗೇ ಇತ್ತು. ಬಸ್ಸು ಬಾರದೇ ಹೋಗಿದ್ದರೆ? ಸದ್ಯ ಅವನ ಪುಣ್ಯ ಅವನನ್ನು ಬಚಾವ್ ಮಾಡಿತು. ರೋಹಿತ್ ಬೇರೆ ಯೋಚನೆ ಮಾಡಲಿಲ್ಲ. ಊಟದೊಂದಿಗೆ ಕಡಲೆಬೇಳೆ ಪಾಯಸವೂ ಇತ್ತು, ಮಧ್ಯಾಹ್ನ ಮಾಡಿದ್ದಿರಬೇಕು, ತಣ್ಣಗಿತ್ತು. ಹಿಂದೆಮುಂದೆ ನೋಡದೆ ಗಬಗಬ ತಿಂದು ಬಾಟಲಿ ಪೂರ್ತಿ ನೀರು ಕುಡಿದ. ಶುಗರ್ ಡೌನ್ ಆದರೆ ಸುಧಾರಿಸಿಕೊಳ್ಳಲು ಎರಡು ಎರಡೂವರೆ ತಾಸಾದರೂ ಬೇಕೇಬೇಕೆನ್ನುವುದು ರೋಹಿತ್‌ನ ಸ್ವಾನುಭವ. ಊಟದ ಕೊನೆಯಲ್ಲಿ ಮೊಸರಿಗೆ ಎರಡು ಮೂರು ಚಮಚೆ ಸಕ್ಕರೆ ಬೆರೆಸಿ ತಿಂದ. ಜೋಮು ಹಿಡಿಯುವ ದಾರಿಯಲ್ಲಿ ಮರಮರವಾಗುತ್ತಿದ್ದ ನಾಲಗೆ ಸಡಿಲವಾಯಿತು. ಹೆಜ್ಜೆ ಊರುವುದು ಕಷ್ಟವಾಗುವ ಸೂಚನೆ ಕೊಟ್ಟಿದ್ದ ಎರಡೂ ಕಾಲಿನ ಸ್ನಾಯುಗಳಲ್ಲಿ ಚೇತರಿಕೆ ಕಾಣಿಸಿತು. ಅದುರಲಾರಂಭವಾಗಿದ್ದ ಹಸ್ತಗಳು ಸ್ವಾಧೀನಕ್ಕೆ ಬಂದವು ಎನ್ನುವುದು ಖಾತ್ರಿಯಾಗಿ ರೋಹಿತ್ ಕೈಗಳನ್ನು ಗಸಗಸ ತಿಕ್ಕಿ ಉಲ್ಲಸಿತನಾದ. ಆದರೂ ಗೆಳೆಯನೊಂದಿಗೆ ಒಂದೆರಡು ತಾಸು ಸತ್ಕಾಲಕ್ಷೇಪ ಮಾಡುವ ಅವಕಾಶ ತಪ್ಪಿ ಹೋಯಿತಲ್ಲ ಎಂಬ ಸಂಕಟದಲ್ಲಿ ಮೊಬೈಲನ್ನು ಕೈಗೆತ್ತಿಕೊಂಡು ಚಂದ್ರಹಾಸನಿಗೆ ಡಯಲ್ ಮಾಡಿದ.

ಶಿರಸಿಯಲ್ಲಿ ನೆಟ್‌ವರ್ಕ್ ಸಮಸ್ಯೆ ಇರಲಿಲ್ಲ. ಚಕ್ ಎಂದು ಫೋನ್ ಗುನುಗುಟ್ಟತೊಡಗಿತು. ಆದರೆ, ಆ ಕಡೆಯಲ್ಲಿ ಚಂದ್ರಹಾಸ ಮಾತ್ರ ಫೋನ್ ಎತ್ತಲಿಲ್ಲ, ಪದೇ ಪದೇ ಡಯಲ್ ಮಾಡಿದರೂ ಅಷ್ಟೆ, ಉತ್ತರವಿಲ್ಲ. ಚಂದ್ರಹಾಸ ಹೀಗೆ ಯಾವತ್ತೂ ಮಾಡಿದವನಲ್ಲ, ಏನಾಗಿರಬಹುದು... ಯೋಚಿಸಿದ. ಬೆಂಗಳೂರಿಂದ ಪ್ರಕಟವಾಗುವ ದೈನಿಕಕ್ಕೆ ಚಂದ್ರಹಾಸ ಶಿವಮೊಗ್ಗ ಜಿಲ್ಲಾ ವರದಿಗಾರ. ಒಂಬತ್ತರವರೆಗೂ ಅವನ ನಿತ್ಯ ಕೆಲಸ. ಕೆಲ ಸಂದರ್ಭಗಳಲ್ಲಿ ವರದಿಗಾರರಿಗೆ ಸಮಯದ ಚೌಕಟ್ಟಿನಲ್ಲಿ ಕೆಲಸ ಮಾಡುವುದು ಆಗದ ಮಾತೆನ್ನುವುದು ರೋಹಿತ್‌ಗೆ ಗೊತ್ತಿತ್ತು. ಅಂಥದ್ದೇನಾದರೂ ಎಮರ್ಜೆನ್ಸಿ ಎದುರಾಗಿರಬಹುದೆ? ಯೋಚಿಸಿದ. 'ದಾಂಡೇಲಿ ಬಸ್ ಶಿವಮೊಗ್ಗಕ್ಕೆ ಬರುವ ಹೊತ್ತಿಗೆ ತಾನು ಫ್ರೀಯಾಗಲು ಸಾಧ್ಯ, ಬಸ್ ಇಳಿದು ಬ್ಯಾಕ್ ಪ್ಯಾಕನ್ನು ಲಗ್ಗೇಜ್ ರೂಂನಲ್ಲಿಟ್ಟು ಆಟೋ ಹಿಡಿದು ಸೀದಾ ಡೈಮಂಡ್ ರಾಕ್‌ಗೆ ಬಾ, ಅಲ್ಲಿ ಚಿಕನ್, ಫಿಷ್ ಎಕ್ಸಲೆಂಟ್ ಮಾರಾಯಾ, ಮಂಗಳೂರು ಕಡೆ ಬಂಟ್ಸ್ ನಡೆಸುವ ಹೋಟೆಲು' ಎಂದು ಗೆಳೆಯನ ಭೇಟಿ ನಿರೀಕ್ಷೆಯಲ್ಲಿ ಬಡಬಡಿಸಿದ್ದ. ಮನೆ ಮಟ್ಟಿಗೆ ಪಕ್ಕಾ ವೆಜಿಟೇರಿಯನ್ ಆದ ರೋಹಿತ್‌ನ ನಾಲಗೆಯಲ್ಲಿ ಗೆಳೆಯನ ಮಾತು ಬಳಬಳ ನೀರೂರಿಸಿತ್ತು. ರಾತ್ರಿ ಹನ್ನೆರಡರ ವೋಲ್ವೋದಲ್ಲಿ ಸೀಟನ್ನು ಅವನೇ ಕಾಯ್ದಿರಿಸಿದ್ದ ಕೂಡಾ. 'ಒಂದಿಷ್ಟು ಹರಟೋಣ, ಬೋರಾಗಿ ಹೋಗಿದೆ ಮಾರಾಯಾ' ಎಂದೆಲ್ಲ ಉಬ್ಬಿಸಿದ್ದ ಮಹಾರಾಯ ಈಗ ನೋಡಿದರೆ ಫೋನನ್ನೇ ರಿಸೀವ್ ಮಾಡ್ತಾ ಇಲ್ಲ, ಯಾಕೆ... ಏನಾಗಿರಬಹುದು... ತಲೆ ಕೆರೆದುಕೊಂಡ ರೋಹಿತ್.